**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟ, ಉಪಸ್ಥಿತಿ- ಜಮಖಂಡಿ**

**ಸ್ಪೇಷಲ್ ಕೇಸ್ ನಂ. 5013/2023**
**ಪಿಡಬ್ಲ್ಯೂ-5**
**ಸಿಡಬ್ಲ್ಯೂ-4**

ಹೆಸರು : ಸೈದಪ್ಪ ಬಾಬಣ್ಣ ಇಂಗಳೆ

ವಯಸ್ಸು : 40 ವರ್ಷ

ಉದ್ಯೋಗ : ತಹಶೀಲ್ದಾರ, ಚಡಚಣ, ವಿಜಯಪುರ ಜಿಲ್ಲೆ

ವಾಸಸ್ಥಳ : ಚಡಚಣ

====

**ಸಾಕ್ಷಿಗೆ ಇಂದು ದಿನಾಂಕ 03.09.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ**

ನಾನು 2019 ರಿಂದ 2021 ರ ಅಗಷ್ಟ ರವರೆಗೆ ಜಮಖಂಡಿಯ ತಹಶೀಲ್ದಾರ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾ.ಸಾ.2 ಮತ್ತು 3 ಕ್ರಮವಾಗಿ ಕಂದಾಯ ನೀರಿಕ್ಷಕರು ಹಾಗೂ ಗ್ರಾಮಲೆಕ್ಕಾಧಿಕಾರಿ ಆಗಿರುತ್ತಾರೆ.

2. ದಿನಾಂಕ 04.11.2019 ರಂದು ಬೆಳಿಗ್ಗೆ 8.30 ಗಂಟೆಗೆ ನಾನು ನನ್ನ ಕಚೇರಿಯಲ್ಲಿದ್ದಾಗ, ಜಮಖಂಡಿ ವೃತ್ತ ನೀರಿಕ್ಷಕರು ಗಾಂಜಾ ಜಪ್ತು ಮಾಡುವ ಸಲುವಾಗಿ ಇಬ್ಬರು ಸರ್ಕಾರಿ ಪಂಚರನ್ನು ಕಳುಹಿಸಿಕೊಡಬೇಕೆಂದು ನನಗೆ ಮನವಿ ನೀಡಿದರು. ಸದರಿ ಮನವಿ ನಿ.ಪಿ.11 ರಂತೆ ಇದೆ. ಅದೇ ದಿವಸ ಬೆಳಿಗ್ಗೆ 9.30 ಗಂಟೆಗೆ ನಾನು ನನ್ನ ಸರ್ಕಾರಿ ಜೀಪಿನಲ್ಲಿ ಚಾ.ಸಾ.2 ಹಾಗೂ 3 ರವರೊಂದಿಗೆ ಸಿ.ಪಿ.ಐ ಕಚೇರಿಗೆ ಹೋದೆ. ಠಾಣೆಗೆ ಹೋದ ನಂತರ ಸಿ.ಪಿ.ಐ ರವರು ಹಿರೇಪಡಸಲಗಿಯ ಒಂದು ಜಮೀನಿನ ತೋಟದ ಮನೆಯಲ್ಲಿ ಅಕ್ರಮವಾಗಿ ಗಾಂಜಾ ಸಂಗ್ರಹಿಸಿಟ್ಟಿದ್ದಾರೆ ಎಂದು ಮಾಹಿತಿ ಬಂದಿದೆ, ರೇಡ್ ಮಾಡಲು ಹೋಗಬೇಕು ಎಂದು ಹೇಳಿದ್ದರಿಂದ, ಅವರೊಂದಿಗೆ ಘಟನಾ ಸ್ಥಳಕ್ಕೆ ನನ್ನ ಇಲಾಖಾ ಜೀಪಿನಲ್ಲಿ ಹೋದೆನು. ನಂತರ ನಾವು ಸ್ಥಳದಲ್ಲಿ ಬೆಳಿಗ್ಗೆ 10.40 ಕ್ಕೆ ತಲುಪಿದೆವು. ನಾವು ಸ್ಥಳಕ್ಕೆ ಹೋಗಿ ನೋಡಿದಾಗ , ಒಬ್ಬರು ಗೋಣಿಚೀಲ ಹಿಡಿದುಕೊಂಡಿದ್ದರು, ಇನ್ನೊಬ್ಬ ಅದರಲ್ಲಿ ಗಾಂಜಾ ತುಂಬುತ್ತಿದ್ದರು. ಆಗ ವಿಚಾರಿಸಿದಾಗ, ಸ್ಥಳದಲ್ಲಿದ್ದ ಮಂಜುನಾಥ ಧರೆಪ್ಪ ಗುಗ್ಗರಿ ಎಂದು ಹಾಗೂ ಇನ್ನೊಬ್ಬ ವ್ಯಕ್ತಿ ಮಾಳಪ್ಪ ಅರವಿಂದ ಗುಗ್ಗರಿ ಎಂದು ಗೊತ್ತಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ವ್ಯಕ್ತಿಗಳಾಗಿರುತ್ತಾರೆ.

3. ಇಬ್ಬರನ್ನು ವಿಚಾರಿಸಿದಾಗ, ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡಲು ಚೀಲದಲ್ಲಿ ತುಂಬುತ್ತಿರುವುದಾಗಿ ಹೇಳಿದರು. ನಂತರ ಅವರ ಬಳಿಯಿದ್ದ ಗಾಂಜಾವನ್ನು ಸಿ ಪಿ ಐ ರವರು ತೂಕ ಮಾಡಿದಾಗ 4 ಕೆಜಿ 900 ಗ್ರಾಂ ಇತ್ತು. ಅದರಿಂದ 100 ಗ್ರಾಂ ಮಾದರಿಗಾಗಿ ಜಪ್ತುಪಡಿಸಿಕೊಂಡೆವು. ಜಪ್ತಿಮಾಡಿ ಪಂಚನಾಮೆ ಮಾಡಲಾಯಿತು. ಸದರಿ ಪಂಚನಾಮೆ ಈಗಾಗಲೇ ನಿ.ಪಿ.1 ಎಂದು ಗುರ್ತಿಸಲಾಗಿದ್ದು, ನನ್ನ ಸಹಿ ನಿ.ಪಿ.1(ಸಿ)ರಂತೆ ಇದೆ. ನಂತರ ಸ್ಥಳದಲ್ಲಿ ಕಚ್ಚಾನಕಾಶೆಯನ್ನು ತಯಾರಿಸಲಾಯಿತು. ಅದಕ್ಕೂ ಸಹ ನಾನು ಸಹಿ ಮಾಡಿದ್ದೇನೆ, ಕಚ್ಚಾನಕಾಶೆ ನಿ.ಪಿ.2 ರಂತೆ ಇದ್ದು, ನನ್ನ ಸಹಿ ನಿ.ಪಿ.2(ಸಿ)ರಂತೆ ಇದೆ. ನಂತರ ಸ್ಥಳದಲ್ಲಿ ಫೋಟೋಗಳನ್ನು ತೆಗೆಯಲಾಯಿತು. ಆ ಸಮಯದಲ್ಲಿ ಎರಡು ಮನೆಯಲ್ಲಿ ಮತ್ತು ಒಂದು ತೋಟದಲ್ಲಿ ತೆಗೆದ ಫೋಟೋಗಳು ನಿ.ಪಿ.3 ರಿಂದ 5 ರಂತೆ ಇವೆ. ಸ್ಥಳದಲ್ಲಿ ತೆಗೆದ ಸ್ಯಾಂಪಲ್ ಮು.ಮಾ.1 ಎಂದು ಈಗಾಗಲೇ ಗುರ್ತಿಸಲಾಗಿದ್ದು, ಅದನ್ನು ನೋಡುತ್ತಿದ್ದೇನೆ. ನಾನು ನಂತರ ಸಿ ಪಿ ಐ ರವರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಆರ್ ಟಿ ಎಚ್ ವಕೀಲರಿಂದ</u>**

4. ನಾನು ಚಾ.ಸಾ.2 ಹಾಗೂ 3 ರವರಿಗೆ ಮೌಖಿಕವಾಗಿ ಮಾಹಿತಿ ನೀಡಿ ಕಚೇರಿಯಿಂದ ಕರೆದುಕೊಂಡು ಹೋಗಿದ್ದೇನೆ. ಲಿಖಿತವಾಗಿ ಯಾವುದೇ ಮಾಹಿತಿ ನೀಡಿಲ್ಲ. ನಮ್ಮ ಕಚೇರಿಯಲ್ಲಿ ಚಲನ-ವಲನ ವಹಿ ನಿರ್ವಹಿಸುತ್ತೇವೆ. ನಾವು ದಾಳಿಗೆ ಹೋಗುವಾಗ ನಮ್ಮ ಕಚೇರಿಯ ಚಲನ-ವಲನ ಪುಸ್ತಕದಲ್ಲಿ ನಮೂದಿಸಿಲ್ಲ. ಮನೆಯಿಂದ 100 ಮೀ ಅಂತರದಲ್ಲಿ ಜೀಪನ್ನು ನಿಲ್ಲಿಸಿ ನಾವು ಸ್ಥಳಕ್ಕೆ ಹೋದೆವು. ಹೊಲದ ಸರ್ವೇ ನಂ.98/1-ಅ ಆಗಿದೆ. ಸದರಿ ಜಮೀನು ಯಾರ ಹೆಸರಿನಲ್ಲಿತ್ತು ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಯಾರು ಉಳುಮೆ ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಹೊಲದಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ, ಆದರೆ ಘಟನಾ ಸ್ಥಳ ಮನೆ ಪ್ರದೇಶವಾಗಿತ್ತು. ಮನೆಯ ಪಡಸಾಲೆಯಲ್ಲಿ ಇಬ್ಬರು ಮಾತ್ರ ಇದ್ದರು. ನಾನು ಪಡಸಾಲೆಯಲ್ಲಿ ನಿಂತೇ ಆರೋಪಿತರನ್ನು ನೋಡಿದ್ದೇನೆ.

**ಪಿಡಬ್ಲ್ಯು-5**
**ಸಿಡಬ್ಲ್ಯು-4**

5. ಪಂಚನಾಮೆ ಹಾಗೂ ಕಚ್ಚಾನಕಾಶೆಯಲ್ಲಿ ಕೃತ್ಯಸ್ಥಳದ ಸರ್ವೆ ನಂ. ನಮೂದಿಸಿಲ್ಲ. ಸ್ಥಳದಲ್ಲಿ ಸಾರ್ವಜನಿಕರು ಯಾರೂ ಇರಲಿಲ್ಲ. ಗಾಂಜಾವನ್ನು ಸ್ಥಳದಲ್ಲಿ ಎಲೆಕ್ಟ್ರಾನಿಕ್ ತೂಕದ ಯಂತ್ರದಿಂದ ತೂಕಮಾಡಿದರು, ಪೋಲಿಸ ಸಿಬ್ಬಂದಿ ತೂಕ ಮಾಡಿದರು. ತೂಕಮಾಡುವ ಯಂತ್ರ ಯಾರಿಗೆ ಸೇರಿದ್ದು ಎಂದು ಪೋಲಿಸರಿಗೆ ಗೊತ್ತು. ಪಂಚನಾಮೆ ಮಾಡುವ ಮುಂಚೆ ತೂಕದ ಯಂತ್ರದ ನಿಖರತೆಯ ಬಗ್ಗೆ ಪರಿಶೀಲಿಸಿಕೊಂಡಿದ್ದೆವು. ತೂಕದಯಂತ್ರದ ನಿಖರತೆ ಪರಿಶೀಲಿಸಿದ ಬಗ್ಗೆ ಪಂಚನಾಮೆ ಮಾಡಿಲ್ಲ. ಮು.ಮಾ.1 ರ ಮೇಲೆ ಮಾದರಿಗಾಗಿ ಎಂದು ಬರೆದು ಸೀಲ್ ಮಾಡಲಾಯಿತು. ಪಂಚನಾಮೆಯನ್ನು ಪೋಲಿಸ ಸಿಬ್ಬಂದಿಯವರು ಬರೆದರು, ಯಾರು ಬರೆದರು ಗೊತ್ತಿಲ್ಲ. ಸ್ಥಳದಲ್ಲಿ ನಾವು 12.30 ವರೆಗೆ ಇದ್ದೆವು.

6. ನನಗೆ ಸಿ ಪಿ ಐ ರವರಿಂದ ಯಾವುದೇ ಲಿಖಿತ ನಿವೇದನೆ ಬಂದಿರಲಿಲ್ಲ ಅಂದರೆ ಸರಿಯಲ್ಲ. ನಾನು ಚಾ.ಸಾ.2 ಹಾಗೂ 3 ರವರನ್ನು ಕಚೇರಿಗೆ ಬರಮಾಡಿಕೊಂಡು, ಅವರಿಗೆ ಮಾಹಿತಿ ನೀಡಿ, ನನ್ನೊಂದಿಗೆ ಘಟನಾಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಅಂದರೆ ಸರಿಯಲ್ಲ. ಸ್ಥಳದಲ್ಲಿ ಒಬ್ಬರು ಆರೋಪಿತರು ಗಾಂಜಾದ ಚೀಲ ಹಿಡಿದುಕೊಂಡು ಇದ್ದರು ಮತ್ತು ಇನ್ನೊಬ್ಬರು ತುಂಬುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಗಾಂಜಾ ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಯೇ ಇಲ್ಲ ಅಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಗಾಂಜಾಕ್ಕೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ.ಕೇ. ಸರಿ ಅದೆ.

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟ, ಉಪಸ್ಥಿತಿ- ಜಮಖಂಡಿ**

**ಸ್ಪೇಷಲ್ ಕೇಸ್ ನಂ. 5013/2023**
**ಪಿಡಬ್ಲ್ಯೂ-6**
**ಸಿಡಬ್ಲ್ಯೂ-13**

ಹೆಸರು : ಸಂಗಮೇಶ ಪರಗೊಂಡ ತುಪ್ಪದ

ವಯಸ್ಸು : 38 ವರ್ಷ

ಉದ್ಯೋಗ : ಸಿ.ಪಿ.ಸಿ.424, ಜಮಖಂಡಿ ಸಿ.ಪಿ.ಐ ಕಚೇರಿ

ವಾಸಸ್ಥಳ : ಜಮಖಂಡಿ

====

**ಸಾಕ್ಷಿಗೆ ಇಂದು ದಿನಾಂಕ 03.09.2024 ರಂದು ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ**

ನಾನು 2017 ರಿಂದ 2020 ರ ವರೆಗೆ ಜಮಖಂಡಿ ವೃತ್ತ ನೀರಿಕ್ಷಕರ ಕಚೇರಿಯಲ್ಲಿ ಪೋಲಿಸ ಪೇದೆಯಾಗಿ ಸೇವೆ ಸಲ್ಲಿಸಿರುತ್ತೇನೆ.

2. ದಿನಾಂಕ 04.11.2019 ರಂದು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಸಿ ಪಿ ಐ ರವರಾದ ಚಾ.ಸಾ.1 ರವರೊಂದಿಗೆ ಹಿರೇಪಡಸಲಗಿ ಗ್ರಾಮಕ್ಕೆ ಗಾಂಜಾ ರೇಡ್ ಮಾಡಲು ಹೋದೆನು. ನಾವು ಠಾಣೆಯಿಂದ ಘಟನಾ ಸ್ಥಳಕ್ಕೆ ಹೋದೆವು, ಅಲ್ಲಿ ಮಂಜುನಾಥ ಗುಗ್ಗರಿ ರವರ ಮನೆಗೆ ಹೋದಾಗ, ಸದರಿ ಮನೆಯಲ್ಲಿ ಚೀಲದಲ್ಲಿ ಗಾಂಜಾ ಚೀಲದಲ್ಲಿ ತುಂಬುತ್ತಿದ್ದರು. ಆಗ ಅಧಿಕಾರಿಗಳು ದಾಳಿಮಾಡಿ, ಸಿಕ್ಕಂತಹ ಗಾಂಜಾವನ್ನು ನ್ಯಾಯಾಲಯದ ಮುಂದಿರುವ ಆರೋಪಿತರಿಂದ ವಶಪಡಿಸಿಕೊಂಡರು. ಆರೋಪಿತರಿಂದ ಗಾಂಜಾ ವಶಪಡಿಸಿಕೊಂಡ ಬಗ್ಗೆ ಪಂಚನಾಮೆ ಮಾಡಿದರು. ಆಗ ಸಾವಳಗಿ ಠಾಣೆಯ ಲ್ಯುಮಿಕ್ಸ ಕಂಪನಿಯ ಕ್ಯಾಮೆರಾದಿಂದ ಫೋಟೋಗಳನ್ನು ತೆಗೆದಿರುತ್ತೇನೆ. ಫೋಟೋಗಳನ್ನು ಈಗಾಗಲೇ ನಿ.ಪಿ.3 ರಿಂದ 5 ಎಂದು ಗುರ್ತಿಸಲಾಗಿದೆ. ಸದರಿ ಫೋಟೋ ತೆಗೆದ ಬಗ್ಗೆ ನಾನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65-ಬಿ ಪ್ರಮಾಣಪತ್ರ ನೀಡಿರುತ್ತೇನೆ. ಅದು ನಿ.ಪಿ.12 ರಂತೆ ಇದೆ, ನನ್ನ ಸಹಿ ನಿ.ಪಿ.12(ಎ) ರಂತೆ ಇದೆ.

3. ನಂತರ ಜಮಖಂಡಿಯ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಆದ ಇನ್ವೆಂಟ್ರಿಯ ಸಮಯದಲ್ಲಿಯೂ ನಾನು ಫೋಟೋ ತೆಗೆದಿರುತ್ತೇನೆ. ಸದರಿ ಇನ್ವೆಂಟ್ರಿ ಕಾಲಕ್ಕೆ ತೆಗೆದ ಫೋಟೋಗಳನ್ನು ಜೆ ಎಂ ಎಫ್ ಸಿ ನ್ಯಾಯಾಲಯ ಜಮಖಂಡಿ ರವರಿಗೆ ಪತ್ರದೊಂದಿಗೆ ನೀಡಿರುತ್ತೇನೆ. ಸದರಿ ಪತ್ರ ನಿ.ಪಿ.13 ಮತ್ತು ನನ್ನ ಸಹಿ ನಿ.ಪಿ.13(ಎ) ರಂತೆ ಇದೆ. ನಾನು ಫೋಟೋ ತೆಗೆಯುವ ಕಾಲಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿತರು ಇದ್ದರು.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಆರ್ ಟಿ ಎಚ್ ವಕೀಲರಿಂದ</u>**

4. ನಾವು ಘಟನಾ ಸ್ಥಳಕ್ಕೆ 10.45 ಗಂಟೆಗೆ ಹೋದೆವು. ಮನೆಯ ಮುಂದುಗಡೆ ಶೆಡ್ ಇದೆ, ಅಲ್ಲಿ ನಿಂತು ಏನು ಮಾಡುತ್ತಿದ್ದಾರೆ ಎಂದು ಗಮನಿಸುತ್ತಿದ್ದೆವು. ನಾವು ನಮ್ಮ ವಾಹನಗಳನ್ನು ಘಟನಾ ಸ್ಥಳದಿಂದ 100 ಮೀ ದೂರದಲ್ಲಿ ನಿಲ್ಲಿಸಿದ್ದೆವು. ಘಟನಾ ಸ್ಥಳದ ಜಮೀನಿನ ಸರ್ವೆ ನಂ. ಹೇಳಲು ಬರುವುದಿಲ್ಲ. ಸದರಿ ಜಮೀನು ಮಂಜುನಾಥ ಗುಗ್ಗರಿಯವರ ತಂದೆಯ ಹೆಸರಿನಲ್ಲಿ ಇದೆ. ಸದರಿ ಜಮೀನು ಆರೋಪಿ ಮಂಜುನಾಥ ಗುಗ್ಗರಿಯವರೇ ವ್ಯವಸಾಯ ಮಾಡುತ್ತಿದ್ದರು. ನಾವು ಸ್ಥಳಕ್ಕೆ ಹೋದಾಗ, ಸ್ಥಳದಲ್ಲಿ ಆರೋಪಿತರಿಬ್ಬರೇ ಇದ್ದರು. ಸ್ಥಳದಲ್ಲಿ ಗಾಂಜಾ ವನ್ನು ಸಾವಳಗಿ ಠಾಣೆಯ ಎನ್ ಬಿ ಆಯತವಾಡ ರವರು ಮಾಡಿದರು. ತೂಕಮಾಡಿದ ತೂಕದ ಯಂತ್ರ ಯಾರಿಗೆ ಸಂಬಂಧಪಟ್ಟಿದ್ದು ಗೊತ್ತಿಲ್ಲ. ಸ್ಥಳದಲ್ಲಿ ತೂಕಮಾಡುವ ಮುಂಚೆ ತೂಕದಯಂತ್ರದ ನಿಖರತೆ ಪರಿಶೀಲಿಸಲಾಯಿತು, ಆದರೆ ಅದರ ಬಗ್ಗೆ ಪಂಚನಾಮೆ ಬರೆದಿಲ್ಲ. ಸ್ಥಳದಲ್ಲಿ ರೇಡ್ ಮುಗಿಯುವಾಗ ಮಧ್ಯಾಹ್ನ 12.30 ಆಗಿತ್ತು.

5. ಸ್ಥಳದಲ್ಲಿ ದಾಳಿ ಮಾಡುವಾಗ ಅಕ್ಕಪಕ್ಕದವರು ನೋಡಲು ಬಂದಿದ್ದರು. ನಾನು ತೆಗೆದ ಫೋಟೋಗಳ ಪ್ರಿಂಟಗಳನ್ನು ಯಾರು ತೆಗೆದುಕೊಟ್ಟರು ಗೊತ್ತಿಲ್ಲ, ಆದರೆ ರಾಜ್ ಕಲರ್ ಲ್ಯಾಬಿನಲ್ಲಿ ಫೋಟೋಗಳನ್ನು ತೊಳೆಸಿದ್ದೇನೆ. ಫೋಟೋ ತೊಳೆದವರ ಪತ್ರವನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಚಾ.ಸಾ.1 ರವರೊಂದಿಗೆ ಹಿರೇಪಡಸಲಗಿ ಗ್ರಾಮಕ್ಕೆ ಗಾಂಜಾ ರೇಡಿಗೆ ಹೋಗಿಲ್ಲ ಅಂದರೆ ಸರಿಯಲ್ಲ ಹಾಗೂ ಅಲ್ಲಿ ಅಧಿಕಾರಿಗಳ

**ಪಿಡಬ್ಲ್ಯೂ-6**
**ಸಿಡಬ್ಲ್ಯೂ-13**

ಮಾಹಿತಿ ಮೇರೆಗೆ ಯಾವುದೇ ಫೋಟೋ ತೆಗೆದಿಲ್ಲ ಅಂದರೆ ಸರಿಯಲ್ಲ. ಗಾಂಜಾ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ರೇಡ್ ಕಾಲಕ್ಕೆ ಯಾವುದೇ ಫೋಟೋ ತೆಗೆಯದಿದ್ದರೂ ಸಹ, ತೆಗೆದಿದ್ದೇನೆ ಎಂದು ಸುಳ್ಳು 65-ಬಿ ಪ್ರಮಾಣಪತ್ರವನ್ನು ನೀಡಿದ್ದೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ. ಸರಿ ಅದೆ.

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.